ಅ. ರಾಜ್ಯದಲ್ಲಿ ಹವಾನಿಯಂತ್ರಿತ ವ್ಯವಸ್ಥೆ ಹೊಂದಿರುವ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿಗಳು ಯಾವುವು?

ಆ. ಈ ವ್ಯವಸ್ಥೆಯನ್ನು ಯಾವ ಅನುದಾನದಲ್ಲಿ ಮಾಡಲಾಗಿದೆ.

ಇ. ಈ ಬಗ್ಗೆ ಬಜೆಟ್‌ನಲ್ಲಿ ಅವಕಾಶ ಕಲ್ಪಿಸಲಾಗಿದೆಯೇ? ಹಾಗೂ ಈ ಬಗ್ಗೆ ಸರಕಾರದ ಅನುಮತಿ ಪಡೆಯಲಾಗಿದೆಯೇ

ಶ್ರೀ ಡಿ.ಮಂಜುನಾಥ (ಅರಣ್ಯ ಸಚಿವರು):

ಅ. 1) ಉಪ ಅರಣ್ಯ ಸಂರಕ್ಷಣಾಧಿಕಾರಿ ರಾಯಚೂರುರವರ ಕಛೇರಿ

2) ಉಪ ಅರಣ್ಯ ಸಂರಕ್ಷಣಾಧಿಕಾರಿ ಮಂಗಳೂರು ರವರ ಕಛೇರಿ,

3) ಉಪ ಅರಣ್ಯ ಸಂರಕ್ಷಣಾಧಿಕಾರಿ ಕುಂದಾಪುರ ರವರ ಕಛೇರಿ,

ಆ. 1) ರಾಯಚೂರು ಕಛೇರಿಯಲ್ಲಿ ಹವಾನಿಯಂತ್ರಿತ ವ್ಯವಸ್ಥೆಯನ್ನು ಅಳವಡಿಸಿದ ವೆಚ್ಚವನ್ನು 2406-01-105-51 ಟಿಂಬರ್ ಶೀರ್ಷಿಕೆಯಲ್ಲಿ ಖರ್ಚು ಮಾಡಲಾಗಿದೆ.

2) ಮಂಗಳೂರು ಮತ್ತು ಕುಂದಾಪುರ ಕಛೇರಿಗಳಲ್ಲಿ ಅಳವಡಿಸಿದ ವೆಚ್ಚವನ್ನು ಇನ್ನೂ ಭರಿಸಿರುವುದಿಲ್ಲ.

ಇ. ರಾಯಚೂರು ವಿಭಾಗಕ್ಕೆ ಸಂಬಂಧಿಸಿದಂತೆ ಬಜೆಟ್‌ನಲ್ಲಿ ಅವಕಾಶ ಕಲ್ಪಿಸಿದೆ. ಉಳಿದ ವಿಭಾಗಗಳಿಗೆ ಬಜೆಟ್‌ನಲ್ಲಿ ಅವಕಾವ ಕಲ್ಪಿಸಲಾಗಿರುವುದಿಲ್ಲ. ಸರ್ಕಾರದ ಅನುಮತಿ ಪಡೆದಿರುವುದಿಲ್ಲ.

ರಾಜ್ಯದಲ್ಲಿ ಸಣ್ಣ ಉಳಿತಾಯ ಏಜೆಂಟರುಗಳಿಗೆ ಸಂಭಾವನೆ ಕುರಿತು.

552:(3885)

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಣ್ಣ ಉಳಿತಾಯ ಏಜೆಂಟರುಗಳಿಗೆ ಕರಾರಿನಂತೆ ನೀಡಲ್ಪಡುತ್ತಿದ್ದ ಸಂಭಾವನೆ ಪಾವತಿಯಾಗದೆ ಬಾಕಿಯಿರುವುದು ನಿಜವೇ; (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಹಾಗಿದ್ದಲ್ಲಿ ಈ ಮೇಲಣ ಸಂಭಾವನೆ ಎಷ್ಟು ವರ್ಷದಿಂದ ಬಾಕಿಯಿದೆ? ಅದಕ್ಕೆ ಕಾರಣಗಳೇನು?

ಇ) ಅದನ್ನು ಯಾವಾಗ ಪಾವತಿ ಮಾಡಲಾಗುವುದು?

ಈ) ಆಗಿರುವ ವಿಳಂಬಕ್ಕೆ ಪರಿಹಾರ ರೂಪವಾಗಿ ಬಡ್ಡಿ ಏನಾದರೂ ನೀಡಲಾಗುವುದೆ;

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯ ಮಂತ್ರಿಗಳು):

ಅ) ಹೌದು (ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ)

ಆ) 4 ತಿಂಗಳಿನಿಂದ ಬಾಕಿ ಉಳಿದಿದೆ. ಪ್ರೋತ್ಸಾಹ ಧನ ನೀಡುವ ಪ್ರಕ್ರಿಯೆ ಜುಲೈ 98 ರಿಂದ ಪ್ರಾರಂಭವಾಗಿದ್ದು, ಮುಂದುವರೆಯುತ್ತಿದೆ.

ಇ) ಅನುದಾನದ ಲಭ್ಯತೆಗನುಗುಣವಾಗಿ ಜೇಷ್ಠತೆ ಆಧಾರದ ಮೇಲೆ ಪಾವತಿ ಮಾಡಲಾಗುತ್ತಿದೆ.

ಈ) ಇಲ್ಲ.

ಅನುಬಂಧ

1.	ಬೆಂಗಳೂರು ನಗರ	344
2.	ತುಮಕೂರು	267
3	ಕೋಲಾರ	379
4.	ಬೆಂಗಳೂರು ಗ್ರಾಮಾಂತರ	137
5.	ರಾಯಚೂರು ಮತ್ತು ಕೊಪ್ಪಳ	5
6.	ಬಳ್ಳಾರಿ	6
7.	ಮೈಸೂರು ಮತ್ತು ಚಾಮರಾಜಗನರ	75
8.	ಮಂಡ್ಯ	61
9.	ಹಾಸನ	124
10.	ದಕ್ಷಿಣ ಕನ್ನಡ ಮತ್ತು ಉಡುಪಿ	582
11.	ಉತ್ತರ ಕನ್ನಡ	114
12.	ಕೊಡಗು	127
13	ಶಿವಮೊಗ್ಗ	262
14.	ಚಿಕ್ಕಮಂಗಳೂರು	229
15.	ಚಿತ್ರದುರ್ಗ ಮತ್ತು ದಾವಣಗೆರೆ	267
16.	ಬೆಳಗಾವಿ	488
17.	ಧಾರವಾಡ, ಗದಗ, ಹಾವೇರಿ	507
18.	ಬಿಜಾಪುರ ಮತ್ತು ಬಾಗಲಕೋಟೆ	197
		4171